Fine imposed on Karnatak Construction Co.

884. **Sri N. G. HALAPPA** (Channagiri).—

Will the Minister for Public Works be pleased to state :—

(*a*) whether it is a fact that the Superintending Engineer, P.W.D. Division, Shimoga, has fined Karnataka Construction Co. ;

(*b*) if so, the amount of fine that is levied and the amount if any, that is recovered ?

Sri K. LAKKAPPA (Minister for Public Works).—

(*a*) Yes.

(*b*) Rs. 21,892 ; the amount has not been recovered so far.

ಶ್ರೀ ಎನ್. ಜಿ. ಹಾಲಪ್ಪ.—ಕಂಟ್ರಾಕ್ಟರಿಗೆ ಯಾವ ಯಾವ ಲೋಪದೋಷಗಳಿಗಾಗಿ ಜುಲ್ಮಾನೆ ಹಾಕಲಾಗಿದೆ ಎನ್ನುವ ವಿವರಗಳನ್ನು ಕೊಡುವುದಕ್ಕೆ ಸಾಧ್ಯವೇ, ಸ್ವಾಮಿ ?

†ಶ್ರೀ ಕೆ. ಲಕ್ಕಪ್ಪ.— ಯಾವ ಯಾವ ಲೋಪದೋಷಗಳೆಂದಿಲ್ಲ. ನಿಗದಿಯಾದ ಕಾಲದಲ್ಲಿ ಕೆಲಸವನ್ನು ಮಾಡದೆ ಇದ್ದ ಕಾರಣದಿಂದ ಜುಲ್ಮಾನೆ ಹಾಕಿದ್ದಾರೆ.

ಶ್ರೀ ಎನ್. ಜಿ. ಹಾಲಪ್ಪ.—ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪನಿಯಮೇಲೆ ದಂಡ ಹಾಕಿರುವ ಅಫೀಸರನ್ನು ವರ್ಗಮಾಡಬೇಕೆಂದು ಪ್ರಭಾವ ಬೀರುತ್ತಿರುವುದು ಗಮನಕ್ಕೆ ಬಂದಿದೆಯೆ?

ಶ್ರೀ ಕೆ. ಲಕ್ಕಪ್ಪ.—ಅದು ಕೇವಲ ಊಹೆಯ ಮೇಲೆ ಹೇಳುವ ವಿಚಾರ.

ಶ್ರೀ ಎನ್. ಎ. ಚನ್ನೇಗೌಡ.—21,892 ರೂಪಾಯಿ ದಂಡ ಹಾಕಿರುವುದಕ್ಕೆ ಆಧಾರವೇನು ? ಹಾಕಿರುವುದೇಕೆ ? ದಂಡ ವಸೂಲಾಗದಿರುವುದಕ್ಕೆ ರಾಜಕೀಯ ಕಾರಣವೇನಾದರೂ ಇದೆಯೇ ? ಯಾರಾದರೂ ಪ್ರಭಾವ ಬೀರಿದ್ದರಿಂದ ತಡವಾಗಿದೆಯೇ ?

ಶ್ರೀ ಕೆ. ಲಕ್ಕಪ್ಪ.—ಕೆಲಸ ಸಕಾಲದಲ್ಲಿ ಮಾಡಲಿಲ್ಲವೆಂಬ ಕಾರಣದಿಂದ 16-12-68ರಲ್ಲಿ ಕಂಟ್ರಾಕ್ಟರನ್ನು ಟರ್ಮಿನೇಟ್ ಮಾಡಿ ಒಟ್ಟು ಎಸ್ಟಿಮೇಟಿನಮೇಲೆ ಶೇಕಡ ಏಳೂವರೆಯ ಪ್ರಕಾರ ಲೆಕ್ಕ ಹಾಕಿ 21,892 ರೂಪಾಯಿಗಳ ಜುಲ್ಮಾನೆ ಹಾಕಿದೆ. ಹಾಕಿದಮೇಲೆ ಅದನ್ನು ವಸೂಲು ಮಾಡಬೇಕಾಗುತ್ತದೆ. ಫೈನಲ್ ಬಿಲ್ ಆದಮೇಲೆ ಅವರಿಗೆ ಕೊಡಬೇಕಾದ್ದಿದ್ದರೆ ಅದರಿಂದ ವಸೂಲು ಮಾಡುತ್ತಿದ್ದರು. ಕಂಟ್ರಾಕ್ಟರಿಗೆ ಅದರಿಂದೇನೂ ಬರಬೇಕಾಗಿರಲಿಲ್ಲ. ಬೇರೆ ಬಿಲ್ ಬಂದಾಗ ವಸೂಲು ಮಾಡಬೇಕಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪನಿಗೆ ಪಿ.ಡಬ್ಲ್ಯು.ಡಿ. ನಲ್ಲಿ ಎಷ್ಟು ಕಂಟ್ರಾಕ್ಟ್ ಕೊಡಲಾಗಿದೆ ? ಎಷ್ಟು ಕೆಲಸಗಳನ್ನು ಸಕಾಲದಲ್ಲಿ ನಡೆಸದೆ ನಿಲ್ಲಿಸಿದ್ದಾರೆ ? ಇದರಲ್ಲಿರುವ ಪಾರ್ಟನರ್ಸ್ ಯಾರು ?

Sri K. LAKKAPPA.—I want notice for that.

Sri H. SIDDAVEERAPPA.—May I know at least who are all the partners of this company ?

Sri K. LAKKAPPA.—I want notice for that.

Sri H. SIDDAVEERAPPA.—Sir, has not that file come to the Hon. Minister so far ? Is it not a fact that the nephew of Sri Nijalingappa, Sri Gurunath is one of the partners there ?

Sri K. LAKKAPPA.—Sir, we only look into the names of firms. We do not know who are all the partners and persons connected with it.

Sri H. SIDDAVEERAPPA.—Sir, after all, the Construction Company is a body corporate. There are individuals. I want to know who the individuals are that constitute that corporation and there must be a limit for trying to conceal these facts. We are entitled to know this.

Sri K. LAKKAPPA.—If the hon. Member wants particulars, I will furnish it later. For the moment I have no information.

Sri H. SIDDAVEERAPPA.—This is not the way to reply. Sir, I protest.

Sri B. P. GANGADHAR.—The Hon. Minister was pleased to state just now that monies have not been recovered for the reason that in that particular Bill there are no amounts available and if there will be any other amounts due, I am going to take action for the recovery of that money. May I know if a contractor has not completed the work, whether the Government is going to give up that money, or whether there are any other modes by which you can recover those amounts, Sir?

ಶ್ರೀ ಕೆ. ಲಕ್ಕಪ್ಪ.—ಹೌದು, ಜುಲ್ಮಾನೆ ಹಾಕಿರುವುದು ವಸೂಲಾಗಬೇಕು. ಯಾವ ಯಾವ ಸೋರ್ಸ್‌ನಿಂದ ವಸೂಲುಮಾಡಬೇಕೆಂಬುದನ್ನು ಯೋಚನೆಮಾಡುತ್ತಿದ್ದೇವೆ. ಬಿಲ್ಲುಗಳು ಬಂದಾಗ ಬರಬೇಕಾದ್ದನ್ನು ಹಿಡಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ದೊಡ್ಡಬೋರೇಗೌಡ.—ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪೆನಿಯಲ್ಲಿರುವವರು ಯಾವ ತಾಂತ್ರಿಕ ವಿಜ್ಞಾನದಲ್ಲಿ ತರಬೇತಿ ಹೊಂದಿದ್ದಾರೆ? ಈ ಕಂಪೆನಿಯಲ್ಲಿರುವ ನದನ್ಯರ ಸಂಖ್ಯೆಯೆಷ್ಟು?

ಶ್ರೀ ಕೆ. ಲಕ್ಕಪ್ಪ.—ಆಗಲೇ ಅದಕ್ಕೆ ಉತ್ತರ ಹೇಳಿದೆ. ಆ ವಿವರ ಗೊತ್ತಿಲ್ಲ.

Sri M. MALLAPPA.—Among the works that are entrusted, how many works have been completed by them till now?

Sri K. LAKKAPPA.—I want notice for that.

ಶ್ರೀ ವಿ. ಎಲ್. ಶಿವಪ್ಪ—ನುಮಾರು ಒಂದು ವರ್ಷ ಮೂರು ತಿಂಗಳಿನಿಂದ ದಂಡ ವಸೂಲು ಮಾಡಿಲ್ಲ. ಇದಕ್ಕೆ ಕಾರಣ ಅವರು ಪ್ರಬಲವಾದ ಕಂಟ್ರಾಕ್ಟರು ಆದ್ದರಿಂದ ಅವರಿಗೆ ಬೇರೆ ರೀತಿಯಲ್ಲಿ ಎರಡರಷ್ಟು ಮೂರರಷ್ಟು ಹಣ ಒದಗಿಸುವುದಕ್ಕೆ ಸಹಾಯ ಮಾಡಿ ನಂತರ ದಂಡ ವಸೂಲು ಮಾಡಬೇಕೆಂಬ ಅಭಿಪ್ರಾಯದಿಂದ ಹಾಗೆಯೇ ಇಟ್ಟಿದ್ದೀರಾ?

ಶ್ರೀ ಕೆ. ಲಕ್ಕಪ್ಪ.—ಆ ತರಹದ ಅಭಿಪ್ರಾಯದಿಂದ ಏನೂ ನಿಲ್ಲಿಸಿಲ್ಲ.

ಶ್ರೀ ಎಸ್. ಶಿವಪ್ಪ.—ಮಾನ್ಯ ಲೋಕೋಪಯೋಗಿ ಸಚಿವರು ಈ ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪೆನಿಯಲ್ಲಿ ಯಾರ್ಯಾರು ಪಾಲುದಾರರು ಇದ್ದಾರೆ ಎಂಬ ವಿವರ ಇಲ್ಲ ಎಂದು ಹೇಳಿದರು, ಈಗ ಸದ್ಯಕ್ಕೆ ಅವರ ಫೈಲ್‌ನಲ್ಲಿ ಇಲ್ಲದೇ ಇದ್ದರೂ ಕೂಡ ಈ ಸಭೆಗೆ ನಾಳೆ ದಿವಸ ಈ ವಿವರಗಳನ್ನು ಒದಗಿಸುವುದಕ್ಕೆ ಸಿದ್ಧವಾಗಿದ್ದಾರೆಯೇ?

ಶ್ರೀ ಕೆ. ಲಕ್ಕಪ್ಪ.—ಅದನ್ನು ಒದಗಿಸುತ್ತೇವೆ.

Sri C. K. RAJAIAH SHETTY.—Is it not a fact that this Construction Company has claimed 18 per cent more than the estimated rate to cover this fine, Sir?

Sri K. LAKKAPPA.—It is wrong, Sir. It is only 3.54 per cent above the scheduled rate.

ಶ್ರೀ ಎಸ್. ಬಂಗಾರಪ್ಪ.—ಶಿವಮೊಗ್ಗ ಸೂಪರಿಂಟೆಂಡಿಂಗ್ ಇಂಜಿನಿಯರು ಈ ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪೆನಿಗೆ ಈ ರೀತಿ ದಂಡಹಾಕಿರುವುದರಿಂದ ಅವರು ಮುಂದೆ ಆದರೂ ನಮಗೆ ತೊಂದರೆ ಕೊಡುತ್ತಾರೆ ಎಂದು ತಿಳಿದು ಅವರನ್ನು ಪರ್ಗಮಾಡಿನಬೇಕೆಂದು ತೀವ್ರ ಪ್ರಯತ್ನ ನಡೆಯುತ್ತಾ ಇದೆ ಎಂದು ಇವತ್ತು ಬೆಳಿಗ್ಗೆ ಕೂಡ ಗೊತ್ತಾಯಿತು. ಇದು ನಿಜವೇ?

ಶ್ರೀ ಕೆ. ಲಕ್ಕಪ್ಪ.—ಮೊದಲೇ ಉತ್ತರ ಕೊಟ್ಟಿದ್ದೇನೆ. ಮನಸ್ಸಿಗೆ ಬಂದಹಾಗೆ ಊಹೆ ಮಾಡುತ್ತಾರೆಯೇ ಹೊರತು ಅದರಲ್ಲಿ ನಿಜಾಂಶ ಇಲ್ಲ.

Sri S. SIVAPPA.—Sir, this question may be held over.

Mr. SPEAKER.—The Hon. Minister is going to place all the names of the partners on the Table of the House by tomorrow. The hon. Member is at liberty to look into that. The Hon. Minister may please give it tomorrow.

Sri H. SIDDAVEERAPPA.—Sir, while he collects information I would request the Hon. Minister, through the Chair, that information regarding the contracts that are already there in the name of the Construction Company, but which have not been completed like this ?

Bore-Wells

1020. Sri B. VENKATARAYAPPA (Sidlaghatta).—

Will the Minister for Agriculture be pleased to state :—

(*a*) the number of bore-well units kept in the Agriculture Department ;

(*b*) the number of bore-wells dug during 1967-68 ?

Sri B. RACHAIAH (Minister for Agriculture).—

(*a*) 60.

(*b*) 97.

2-00 P.M.

ಶ್ರೀ ಬಿ. ವೆಂಕಟರಾಯಪ್ಪ.—ಉತ್ತರದಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳು ಅಷ್ಟು ತೃಪ್ತಿಕರವಾಗಿಲ್ಲ. ಆದ್ದರಿಂದ ಕೆಲಸ ಇನ್ನೂ ತೀವ್ರವಾಗಿ ನಡೆಯುವುದಕ್ಕೆ ಸರ್ಕಾರದವರು ಏನು ಕ್ರಮ ಕೈಗೊಳ್ಳಬೇಕೆಂದಿದ್ದಾರೆ ?

†ಶ್ರೀ ಬಿ. ರಾಚಯ್ಯ.—ವ್ಯವಸಾಯದ ಇಲಾಖೆಯಲ್ಲಿ 60 ಬೋರ್‌ವೆಲ್‌ಗಳಿಲ್ಲ. ಅಲ್ಲಿ ಇರತಕ್ಕವು 50 ಮಾತ್ರ. ಇನ್ನುಳಿದ 10 ರಿಪೇರಿಯಲ್ಲಿವೆ. ಅಷ್ಟೇ ಅಲ್ಲದೆ ನುರಿತ ಆಪರೇಟರುಗಳ ತೊಂದರೆ ಬೇರೆ ಇತ್ತು. ಅದರಿಂದ 119 ಬಾವಿಗಳನ್ನು ತೆಗೆಸಲಾಯಿತು. ಮುಂದಕ್ಕೆ ಇನ್ನೂ ಹೆಚ್ಚಿನ ಬಾವಿಗಳನ್ನು ತೆಗೆಸುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಇಲ್ಲಿ ಯಾವ ಯಾವ ಐಟಂಗಳಿಗೆ ಎಷ್ಟೆಷ್ಟು ಹಣ ಖರ್ಚಾಗಿದೆ ?

ಶ್ರೀ ಬಿ. ರಾಚಯ್ಯ.—ನೋಟೀಸ್.

ಶ್ರೀ ಬಿ. ವೆಂಕಟರಾಯಪ್ಪ.—ಸಿಡಲುಗಟ್ಟದಲ್ಲಿ ಬೋರ್‌ವೆಲ್ ಮಿಷನ್ನಿನ ಅಗತ್ಯ ಬಹಳವಾಗಿದ್ದರೂ ಅಲ್ಲಿಗೆ ಅದನ್ನು ಕೊಡದೆ ವಿಳಂಬ ಮಾಡುತ್ತಿರುವುದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ.—ಕೋಲಾರ ಜಿಲ್ಲೆಯಲ್ಲಿ 15 ಯೂನಿಟ್ಟುಗಳಿವೆ. ಬೆಂಗಳೂರು ಜಿಲ್ಲೆಯಲ್ಲಿ 12 ಯೂನಿಟ್ಟುಗಳಿವೆ. ಡಿಮ್ಯಾಂಡ್ ಜಾಸ್ತಿ ಇದ್ದುದರಿಂದ ಸ್ವಲ್ಪ ನಿಧಾನವಾಗಿರಬಹುದು.

Mr. SPEAKER.—Question hour is over.